**O.S. 93/2012 pw-2**

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರ.ವ. ಬೋದಿಸಲಾಯಿತು ದಿಃ **14-11-14**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಅದನ್ನು ನಾನು ಓದಿಸಿ ಕೇಳಿ ತಿಳಿದುಕೊಂಡು ಸಹಿಯನ್ನು ಮಾಡಿದ್ದೇನೆ.

ನಾನು ಈ ಕೂಡ ವಂಶವೃಕ್ಷವನ್ನು ಹಾಜರುಮಾಡಿದ್ದು ಅದನ್ನು ನಿಪಿಃ 1 ಎಂದು, ಅಡಂಗಲ್‌ವಹಿಯ ನಕಲನ್ನು ನಿಪಿಃ 2 ಎಂದು, ಸ.ನಂಃ **282/B** ಕ್ಕೆ ಸಂಬಂಧಿಸಿದ ಆರ್‌ಟಿಸಿಯನ್ನು ಹಾಜರುಮಾಡಿದ್ದು ಅದನ್ನು ನಿಪಿಃ 3 ಎಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿಪಿಃ 4 ಎಂದು, ಮತ್ತೊಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿಪಿಃ 5 ಎಂದು, ಮತ್ತೊಂದು ವಂಶವೃಕ್ಷದ ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿಃ 6 ಎಂದು, ಮ್ಯುಟೇಷನ್ ರಿಜಿಸ್ಟರ್‌ನ ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿಃ 7 ಎಂದು, ಸ.ನಂ. **382/B** ಗೆ ಸಂಬಂಧಪಟ್ಟಂತೆ ಎಂಆರ್ ಕಾಪಿಯನ್ನು ಹಾಜರುಮಾಡಿದ್ದು ಅದನ್ನು ನಿಪಿಃ8 ಎಂದು ಸದರಿ ಸರ್ವೆ ನಂಬರ್‌ಗೆ ಸಂಬಂಧಪಟ್ಟಂತೆ ಆರ್‌ಟಿಸಿಯನ್ನು ಹಾಜರುಮಾಡಿದ್ದು ಅದನ್ನು ನಿಪಿಃ 9 ಎಂದು , ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಮಾಡಿದ್ದು ಅದನ್ನು ರುಜುವಾತು ಪಡಿಸುವ ಇರಾದೆ ಮೇರೆಗೆ ಅದನ್ನು ನಿಪಿಃ 10 ಎಂದು, ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಕಾಲಾವಕಾಶಕೇಳಿರುತ್ತಾರೆ ನೀಡಿ ಮುಂದೂಡಲಾಗಿದೆ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಳ್ಳೇಗಾಲ